3. ಸಭೆಯ ಮುಂಡಿದಲಾದ ಕಾಗದ ಪತ್ರಗಳು

I. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) ಅವರ ಪರವಾಗಿ —

1948ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ 61ನೇ ಪ್ರಕರಣದ ಮೇರೆಗೆ;

1. 1998-99ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ವಿತ್ತ ವಿವರಣೆ;

1948ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ 57ನೇ ಪ್ರಕರಣದ ಮೇರೆಗೆ;

2. 1997-98ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪರಿಷ್ಕೃತ ವಿತ್ತ ವಿವರಣೆ;

3. 1996-97ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತನಿಖಾ ವರದಿ ಮತ್ತು ಆಸ್ತಿ ಹೊಣೆ ಪಟ್ಟಿ;

1956ರ ಕಂಪನಿಗಳ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ;

4. 1997-98ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ವಾರ್ಷಿಕ ವರದಿ;

5. 1997-98ನೇ ಸಾಲಿನ ಕರ್ನಾಟಕ ಲೋಕಸೇವಾ ಆಯೋಗದ ವಾರ್ಷಿಕ ವರದಿಗಳನ್ನು ಸಭೆಯ ಮುಂಡಿತ್ತೇನೆ.

II. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮಂತ್ರಿ) ಅವರ ಪರವಾಗಿ

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 300(5)ನೇ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

2) 1997-98ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

3) 1996-97ನೇ ಸಾಲಿನ ಕೋಲಾರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

4) 1996-97ನೇ ಸಾಲಿನ ಬೆಂಗಳೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

5) 1997-98ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

6) 1996-97ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

7) 1997-98ನೇ ಸಾಲಿನ ಮೈಸೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

8) 1997-98ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

9) 1993-94ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

10) 1994-95ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

11) 1995-96ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

12) 1996-97ನೇ ಸಾಲಿನ ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

13) 1997-98ನೇ ಸಾಲಿನ ಬೀದರ್ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

14) 1997-98ನೇ ಸಾಲಿನ ವಿಜಾಪುರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

15) 1997-98ನೇ ಸಾಲಿನ ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

16) 1997-98ನೇ ಸಾಲಿನ ರಾಯಚೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ;

1993ರ ಕರ್ನಾಟಕ ಪಂಚಾಯತ್‌ರಾಜ್ 252(3)ನೇ ಪ್ರಕರಣದ ಮೇರೆಗೆ;

17) 1996-97ನೇ ಸಾಲಿನ ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪರಿಶೋದನಾ ವರದಿ;

18) 1996-97ನೇ ಸಾಲಿನ ಬೀದರ್ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪರಿಶೋದನಾ ವರದಿ;

19) 1995-96ನೇ ಸಾಲಿನ ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪರಿಶೋದನಾ ವರದಿ;

20) 1996-97ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪರಿಶೋದನಾ ವರದಿ;

21) 1996-97ನೇ ಸಾಲಿನ ಬೆಳಗಾವಿ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪರಿಶೋದನಾ ವರದಿ;

22) 1996-97ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪರಿಶೋದನಾ ವರದಿ;

1956ರ ಕಂಪನಿ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ;

23) 1996-97ನೇ ಸಾಲಿನ ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ ವಾರ್ಷಿಕ ವರದಿ;

24) 1995-96ನೇ ಸಾಲಿನ ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತದ 30ನೇ ವಾರ್ಷಿಕ ವರದಿ;

25) 1997-98ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸ್ಯೋದ್ಯಮ ಅಭಿವೃದ್ಧಿ ನಿಗಮದ 28ನೇ ವಾರ್ಷಿಕ ವರದಿ;

26) 1997-98ನೇ ಸಾಲಿನ ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III. ಶ್ರೀ ಸಿ. ಭೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) ಅವರು :—

1956ರ ಕಂಪನಿಗಳ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣಾ ಹಾಗೂ ರಫ್ತು ನಿಗಮ ನಿಯಮಿತದ 2ನೇ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿ;

2) 1997-98ನೇ ಸಾಲಿನ ಕರ್ನಾಟಕ ರಾಜ್ಯ ಆಗ್ರೋಕಾರ್ನ್ ಪ್ರಾಡಕ್ಟ್ಸ್ ನಿಯಮಿತದ 25ನೇ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ;

3) 1996-97ನೇ ಸಾಲಿನ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿ;

4) 1996-97ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿ;

5) 1996-97ನೇ ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ವರದಿ;

6) 1997-98ನೇ ಸಾಲಿನ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 25ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

IV. ಶ್ರೀ ಸಿ. ಭೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಂಸದೀಯ ವ್ಯವಹಾರಗಳ ಮಂತ್ರಿ) ಅವರ ಪರವಾಗಿ

1983ರ ಕರ್ನಾಟಕ ಕಾನೂನು ನೆರವು ಮಂಡಳಿಯ ನಿಯಮ 6ರ ಮೇರೆಗೆ;

1) 1994-95, 1995-96, ಹಾಗೂ 1996-97ನೇ ಸಾಲಿನ ಕರ್ನಾಟಕ ಕಾನೂನು ನೆರವು ಮಂಡಳಿಯ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಗಳು;

1987ರ ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮ ಅನುಚ್ಛೇದ 18(1)ರ ಮೇರೆಗೆ;

2) 1997-98ನೇ ಸಾಲಿನ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

V. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಎಂ. ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಮಂತ್ರಿ) ಅವರ ಪರವಾಗಿ:—

1956ರ ಕಂಪನಿ ಕಾಯ್ದೆಗಳ 619(ಎ) ಮೇರೆಗೆ;

1) 1997-98ನೇ ಸಾಲಿನ ಕೃಷ್ಣಭಾಗ್ಯ ಜಲನಿಗಮ ನಿಯಮಿತದ 4ನೇ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VI. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಬಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ) ಅವರ ಪರವಾಗಿ:—

1956ರ ಕಂಪನಿಗಳ ಕಾಯ್ದೆಯ 619(ಎ) ಕಲಮಿನ ಮೇರೆಗೆ;

1) 1996-97ನೇ ಸಾಲಿನ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 24ನೇ ವಾರ್ಷಿಕ ವರದಿ (ಪರಿಶೀಲನಾ ವರದಿಯೊಂದಿಗೆ)ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VII. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಮಂತ್ರಿ) ಅವರ ಪರವಾಗಿ:—

1956ರ ಕಂಪನಿಗಳ ಕಾಯ್ದೆಯ 619(ಎ) ಮೇರೆಗೆ;

1) 1996-97ನೇ ಸಾಲಿನ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವಾರ್ಷಿಕ ವರದಿ ಲೆಕ್ಕಪತ್ರಗಳ ವರದಿ;

2) 1996-97ನೇ ಸಾಲಿನ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ವರದಿ;

3) 1996-97ನೇ ಸಾಲಿನ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

VIII. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ:—

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 48(5) ಹಾಗೂ 49ನೇ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

2) 1997-98ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

3) 1997-98ನೇ ಸಾಲಿನ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

4) 1997-98ನೇ ಸಾಲಿನ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

5) 1997-98ನೇ ಸಾಲಿನ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

6) 1997-98ನೇ ಸಾಲಿನ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

7) 1997-98ನೇ ಸಾಲಿನ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

8) 1997-98ನೇ ಸಾಲಿನ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

9) 1997-98ನೇ ಸಾಲಿನ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

10) 1997-98ನೇ ಸಾಲಿನ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ;

11) 1997-98ನೇ ಸಾಲಿನ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ;

12) 1997-98ನೇ ಸಾಲಿನ ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

13) 1997-98ನೇ ಸಾಲಿನ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ;

14) 1997-98ನೇ ಸಾಲಿನ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ;

15) 1997-98ನೇ ಸಾಲಿನ ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

16) 1997-98ನೇ ಸಾಲಿನ ಮಡಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

17) 1997-98ನೇ ಸಾಲಿನ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

18) 1997-98ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ;

19) 1997-98ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

20) 1997-98ನೇ ಸಾಲಿನ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

21) 1997-98ನೇ ಸಾಲಿನ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

IX. ಶ್ರೀ ಸಿ. ಭೈರೇಗೌಡ (ಕೃಷಿ ಮತ್ತ ತೋಟಗಾರಿಕೆ ಸಚಿವರು): ಶ್ರೀ ಡಿ ಮಂಜುನಾಥ್ (ಅರಣ್ಯ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಮೈಸೂರ್ ಮ್ಯಾಚ್ ಕಂಪನಿ ನಿಯಮಿತ, ಶಿವಮೊಗ್ಗ ಇದು 58ನೇ ವಾರ್ಷಿಕ ವರದಿ;

2) 1997-98ನೇ ಸಾಲಿನ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ 27ನೇ ವಾರ್ಷಿಕ ವರದಿ;

3) 1997-98ನೇ ಸಾಲಿನ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 20ನೇ ವಾರ್ಷಿಕ ವರದಿ;

4) 1997-98ನೇ ಸಾಲಿನ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತದ 25ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

X. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಬಿ.ಎ. ಮೊಯಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) ಅವರ ಪರವಾಗಿ:—

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 42(2)(3)ನೇ ಪ್ರಕರಣದ ಮೇರೆಗೆ;

1) 1996-97ನೇ ಸಾಲಿನ ಮಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರ ಹಾಗೂ ಪರಿಶೋದನಾ ವರದಿ;

2) 1996-97ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪರಿಶೋದನಾ ವರದಿ;

3) 1996-97ನೇ ಸಾಲಿನ ಮೈಸೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XI. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಸಿ.ಎಂ. ಉದಾಸಿ (ಜವಳಿ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 23ನೇ ವಾರ್ಷಿಕ ವರದಿ;

2) 1997-98ನೇ ಸಾಲಿನ ಕರ್ನಾಟಕ ರಾಜ್ಯ ಜವಳಿ ನಿಯಮಿತದ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XII. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಹೆಚ್.ಡಿ. ರೇವಣ್ಣ (ವಸತಿ ಮಂತ್ರಿ) ಅವರ ಪರವಾಗಿ:—

1973ರ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಅಧಿನಿಯಮ 41ನೇ ಪ್ರಕರಣದ ಮೇರೆಗೆ;

1) 1995-96ನೇ ಸಾಲಿನ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಲೆಕ್ಕಪರಿಶೋಧನಾ ವರದಿ;

2) 1997-98ನೇ ಸಾಲಿನ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವಾರ್ಷಿಕ ವರದಿ;

1962ರ ಕರ್ನಾಟಕ ಗೃಹ ಮಂಡಳಿ ಕಾಯ್ದೆಯ 69 ಹಾಗೂ 55(3)ನೇ ಪ್ರಕರಣದ ಮೇರೆಗೆ;

3) 1996-97ನೇ ಸಾಲಿನ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವಾರ್ಷಿಕ ವರದಿ;

4) 1997-98ನೇ ಸಾಲಿನ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ರಾಜ್ಯ ವಸತಿ ಯೋಜನೆಗಳ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XIII. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕೆ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 34ನೇ ವಾರ್ಷಿಕ ವರದಿ;

2) 1997-98ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 13ನೇ ವಾರ್ಷಿಕ ವರದಿ;

3) 1997-98ನೇ ಸಾಲಿನ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 38ನೇ ವಾರ್ಷಿಕ ವರದಿ;

4) 1997-98ನೇ ಸಾಲಿನ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 21ನೇ ವಾರ್ಷಿಕ ವರದಿ;

5) 1997-98ನೇ ಸಾಲಿನ ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತದ 14ನೇ ವಾರ್ಷಿಕ ವರದಿ;

6) 1997-98ನೇ ಸಾಲಿನ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವಾರ್ಷಿಕ ವರದಿ ಮತ್ತು 1995-96ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XIV. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಎ.ಬಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ, ಪರಸರ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಮೈಸೂರು ಮಿನರಲ್ಸ್ ಲಿಮಿಟೆಡ್‌ನ 32ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XV. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಬಿ.ಎಲ್. ಶಂಕರ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1996-97ನೇ ಸಾಲಿನ ಕರ್ನಾಟಕ ಇಂಪ್ಲಿಮೆಂಟ್ಸ್ ಮತ್ತು ಮೆಷಿನರಿಸ್ ಕಂಪನಿ ನಿಯಮಿತದ 22ನೇ ವಾರ್ಷಿಕ ವರದಿ (ಕಿಂಕೊ)

2) 1997-98ನೇ ಸಾಲಿನ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ 18ನೇ ವಾರ್ಷಿಕ ವರದಿ;

3) 1997-98ನೇ ಸಾಲಿನ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ 32ನೇ ವಾರ್ಷಿಕ ವರದಿ;

4) 1997-98ನೇ ಸಾಲಿನ ಎನ್.ಜಿ.ಇ.ಎಫ್. ನಿಯಮಿತದ 33ನೇ ವಾರ್ಷಿಕ ವರದಿ;

5) 1996-97ನೇ ಸಾಲಿನ ಮೈಸೂರು ಸಿಮೆಂಟ್ ಅಂಡ್ ವಾರ್ನಿಷ್ ನಿಯಮಿತದ 51ನೇ ವಾರ್ಷಿಕ ವರದಿ;

6) 1997-98ನೇ ಸಾಲಿನ ಮೈಸೂರು ಕಾಗದ ಕಾರ್ಖಾನೆ ನಿಯಮಿತದ 63ನೇ ವಾರ್ಷಿಕ ವರದಿ;

7) 1996-97ನೇ ಸಾಲಿನ ಮೈಸೂರು ಎಲೆಕ್ಟ್ರಿಕಲ್ ನಿಯಮಿತದ 52ನೇ ವಾರ್ಷಿಕ ವರದಿ;

8) 1997-98ನೇ ಸಾಲಿನ ವಿಶ್ವೇಶ್ವರಯ್ಯ ಕಬ್ಬಿ ಮತ್ತು ಉಕ್ಕು ನಿಯಮಿತದ 37ನೇ ವಾರ್ಷಿಕ ವರದಿ;

9) 1997-98ನೇ ಸಾಲಿನ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ನಿಯಮಿತದ ವಾರ್ಷಿಕ ವರದಿ;

10) 1997-98ನೇ ಸಾಲಿನ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 62ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XVI. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1993-94ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ಲೆಕ್ಕಪತ್ರ ವರದಿ;

2) 1992-93ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿ;

3) 1991-92ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮದ ಲೆಕ್ಕಪರಿಶೋಧನಾ ವರದಿ;

4) 1997-98ನೇ ಸಾಲಿನ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ 28ನೇ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XVII. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಕೆ. ವೆಂಕಟೇಶ್ (ಅಬ್ಬಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿ) ಅವರ ಪರವಾಗಿ:—

1980ರ ಕಾಡಾ ಅಧಿನಿಯಮದ 25ರ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಕಾವೇರಿ ಜಲಾನಯನ ಯೋಜನೆ ಮೈಸೂರು ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

XVIII. ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು): ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಮಂತ್ರಿ) ಅವರ ಪರವಾಗಿ:—

1956ರ ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1) 1997-98ನೇ ಸಾಲಿನ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಹೀಗೆ ಎಲ್ಲಾ ಸಚಿವರ ಪರವಾಗಿ ಮಾನ್ಯ ಬೈರೇಗೌಡರು ಒಬ್ಬರೇ ಕಾಗದಪತ್ರಗಳನ್ನು ಮಂಡಿಸುತ್ತಿದ್ದಾರೆ. ಯಾರಾದರೂ ಒಬ್ಬಿಬ್ಬರು ಸದನದಲ್ಲಿ ಇರದಿದ್ದರೆ ಅಂಥವರ ಪರವಾಗಿ ಇವರು ಮಂಡಿಸಲು ಅಡ್ಡಿ ಇಲ್ಲ. ಅದನ್ನು ಬಿಟ್ಟು ಇಲ್ಲಿ ಇರುವವರ ಪರವಾಗಿಯೂ ಹೀಗೆ ಒಬ್ಬರು ಮಂಡಿಸುವುದು ಸರಿಯೇ? ಹಾಗಾದರೆ ರೂಲ್ಸ್, ಪ್ರೊಸೀಜರ್ಸ್ ಮುಂತಾಗಿ ಏಕೆ ಇರಬೇಕು?

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ, ಇದು ಸರಿಯೇ ಎಂಬ ಬಗ್ಗೆ ತಾವು ಅಪ್ಪಣೆ ಕೊಡಿಸಬೇಕು. ಯಾರಾದರೂ ಸದನದಲ್ಲಿ ಇರಲಿಲ್ಲ ಅಂದರೆ ಅವರ ಪರವಾಗಿ ಇನ್ನೊಬ್ಬರು ಮಂಡಿಸಬಹುದು. ಇಲ್ಲಿ ಇರುವವರ ಪರವಾಗಿಯೂ ಕೂಡ ಇವರು ಅವರ ಹೆಸರಿನಲ್ಲಿರತಕ್ಕಂಥ ಕಾಗದಪತ್ರಗಳನ್ನು ಮಂಡಿಸುತ್ತೇನೆ ಎಂದು ಹೇಳಿದರೆ ಎಷ್ಟು ಅಪಹಾಸ್ಯವಾಗುತ್ತದೆ? ಇದು ಸರಿ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ಹೇಗೂ ಖಾತೆ ರಹಿತ ಮಂತ್ರಿಗಳು ಇದ್ದಾರಲ್ಲ? ಅವರಿಗೆ ಈ ತರಹದ ಕೆಲಸಗಳನ್ನು ಕೊಟ್ಟುಬಿಡಲಿ..

ಅಧ್ಯಕ್ಷರು :— ಶ್ರೀರಾಮರೆಡ್ಡಿಯವರು ಹೇಳಿದ್ದು ಒಳ್ಳೆಯ ಸಜೆಶನ್....

4. ವರದಿಯನ್ನೊಪ್ಪಿಸುವುದು.

ಶ್ರೀ ಕೆ. ಶರಣಪ್ಪ (ಅಧ್ಯಕ್ಷರು, ಹಕ್ಕು ಬಾಧ್ಯತಾ ಸಮಿತಿ) :— ಮಾನ್ಯ ಅಧ್ಯಕ್ಷರೇ, ಹಕ್ಕು ಬಾಧ್ಯತಾ ಸಮಿತಿಯ ನಾಲ್ಕನೇ ವರದಿಯನ್ನು ತಮ್ಮ ಅನುಮತಿ ಪಡೆದು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ವರದಿಯನ್ನು ಒಪ್ಪಿಸಲಾಯಿತು. ಮಾನ್ಯ ಶ್ರೀರಾಮರೆಡ್ಡಿಯವರು ಕೊಟ್ಟ ಸೂಚನೆ ನಿನ್ನೆ ಬಂದಿದೆ, ಅದನ್ನು ಮುಂದಕ್ಕೆ ತೆಗೆದುಕೊಳ್ಳುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ.

ರಾಜ್ಯದಲ್ಲಿ ಗ್ರಾಮಪಂಚಾಯಿತಿ ಚುನಾವಣೆಗಳನ್ನು ಮುಂದೂಡಿರುವುದು.

+ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೇ, ಪಂಚಾಯತ್ ಚುನಾವಣೆಗಳನ್ನು ರಾಜ್ಯದಲ್ಲಿ ಮುಂದೂಡಿರುವ ಬಗ್ಗೆ, ಸುಗ್ರೀವಾಜ್ಞೆಯನ್ನು ಮಾಡಿರುವುದರ ಬಗ್ಗೆ, ಹಾಗೂ ಅಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವಂಥ ಪ್ರಮುಖ